Mysore Dist.,	—	10
Mandya Dist.,	—	8
Hassan Dist.,	—	4
Kodagu Dist.,	—	9
D.k.Dist.,	—	2
U.k.Dist.,	—	9
Chickmagalur Dist.,	—	7
Shimoga Dist.,	—	5
Chitradurga Dist.,	—	13
Bellary Dist.,	—	5
Belgaum Dist.,	—	7
Dharwad Dist.,	—	11
Bijapur Dist.,	—	4
Raichur Dist.,	—	3
Total		**132**

NOTE: Totally 191 candidates have been selected for the posts of PSI (Civil) RSI/SPL. RSI out of which 132 candidates have already been issued with appointment orders. Remaining selected candidates are yet to be appointed for want of verifcation and medical reports. Out of these, two candidates selected from Bidar Distict are included.

ಹೆಣ್ಣೂರು ಬಳ್ಳಾರಿ ರಸ್ತೆಯ ಬಿಡಿಎ ನಿವಾಸಿಗಳಿಗೆ ಅನುಕೂಲಗಳನ್ನು ಒದಗಿಸುವುದು

216 - ಶ್ರೀ ಬಸವರಾಜ ಪಾಟೀಲ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಬೆಂಗಳೂರು ನಗರದ 10ನೇ ಬಿಟಿಎಸ್ ಡಿಪೋ ಹೆಣ್ಣೂರು ಬಳ್ಳಾರಿ ರಸ್ತೆಯಲ್ಲಿ 4ನೇ ಹಾಗೂ 5ನೇ ಬ್ಲಾಕಿನಲ್ಲಿ ನಿರ್ಮಿಸಿರುವ ಬಿ.ಡಿ.ಎ. ನಿವೇಶನಗಳಿಗೆ ಒಳಚರಂಡಿ ವ್ಯವಸ್ಥೆ, ಬೀದಿ ದೀಪಗಳ ವ್ಯವಸ್ಥೆ ಹಾಗೂ ರಸ್ತೆಗಳನ್ನು ನಿರ್ಮಿಸದಿರುವುದು ನಿಜವೇ?*

ಆ) *ಈ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕೈಗೊಂಡಿರುವ ಕ್ರಮಗಳೇನು ಹಾಗೂ ಕೈಗೊಳ್ಳಲಿರುವ ಕ್ರಮವೇನು?*

ಶ್ರೀ. ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು) :

ಅ) ಹೆಣ್ಣೂರು ಬಳ್ಳಾರಿ ರಸ್ತೆ ಬಡಾವಣೆಯ 4ನೇ ಬ್ಲಾಕ್‌ಗೆ ಒಳಚರಂಡಿ ವ್ಯವಸ್ಥೆಯನ್ನು ಒದಗಿಸಲಾಗಿದೆ. ಈ ಬಡಾವಣೆಯ 4ನೇ ಮತ್ತು 5ನೇ ಬ್ಲಾಕ್‌ಗಳಲ್ಲಿ ರಸ್ತೆ ಕೆಲಸ ಮುಗಿಸಿಕೊಟ್ಟು ಬೀದಿ ದೀಪ ವ್ಯವಸ್ಥೆಗಳನ್ನು ಒದಗಿಸಿಕೊಡಲಾಗಿದೆ.

ಆ) ಇನ್ನು ಈ ಬಡಾವಣೆಯ 5ನೇ ಬ್ಲಾಕಿಗೆ ಸಂಬಂಧಪಟ್ಟಂತೆ ಒಳಚರಂಡಿ ವ್ಯವಸ್ಥೆ ಒದಗಿಸಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದ್ದು, ಶೀಘ್ರದಲ್ಲಿಯೇ ಈ ಕೆಲಸವನ್ನು ಕೈಗೆತ್ತಿಕೊಂಡು ಮುಗಿಸಿಕೊಡಲಾಗುವುದು.